## ಶ್ರೀಮತಿ ವಿಜಯ ಆರ್. ರಾವ್



ಲೂತ್ರಾ ಆ್ಯಂಡ್ ಲೂತ್ರಾ ಲಾ ಫರ್ಮ್, ಮುಂಬಯಿಯಲ್ಲಿ ಪಾಲುದಾರರಾಗಿ ಕೆಲಸ ಮಾಡುತ್ತಿರುವ ಶ್ರೀಮತಿ ವಿಜಯಾ ಆರ್. ರಾವ್ ಅವರಿಗೆ Euro Money Institutional investors PLc.ಯ ವಿಶೇಷ ವಿಭಾಗದ ಏಷ್ಯಾ ಲೀಡಿಂಗ್ ಲಾಯರ್ ಸರ್ವೆ ವಿಭಾಗವು ''ಯೋಜನಾ ಆರ್ಥಿಕತೆ'' (ಪ್ರೊಜೆಕ್ಟ್ ಫೈನಾನ್ಸ್)ಯಲ್ಲಿ **ಏಷ್ಯಾ ಮತ್ತು ಫೆಸಿಫಿಕ್ ಪ್ರಾಂತ್ಯದ ಅತ್ಯುನ್ನತ ಹೆಗ್ಗಳಿಕೆಯ ಕಾನೂನು ತಜ್ಞೆ - 2008 ಪ್ರಶಸ್ತಿ** ನೀಡಿದೆ.

ಶ್ರೀಮತಿ ವಿಜಯಾ ಆರ್. ರಾವ್ ಅವರು ಪ್ರಸಕ್ತ ಮುಂಬಯಿಯಲ್ಲಿ ವಾಸವಾಗಿರುವ ಅಂಬಲಪಾಡಿ ನಾರಾಯಣರಾಯರ ಮಗ ರಘುಪತಿರಾಯರ ಪತ್ನಿ. ಲೂತ್ರಾ ಆ್ಯಂಡ್ ಲೂತ್ರಾ ಲಾ ಫರ್ಮ್‌ನ್ನು ಸೇರುವ ಮೊದಲು ಅವರು ಐಸಿಐಸಿಐ ಬ್ಯಾಂಕ್‌ನಲ್ಲಿ ಉಪಮಹಾಪ್ರಬಂಧಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

ವಿಶೇಷ ಪ್ರಶಸ್ತಿಗೆ ಪಾತ್ರರಾದ ಅವರಿಗೆ ಶ್ರೀ ಶಾರದಾ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ಪಡುಬಿದ್ರಿ ಉದಯಾದ್ರಿಯಲ್ಲಿ ಪ್ರತಿಷ್ಠೆ-ಬ್ರಹ್ಮಕಲಶಾಭಿಷೇಕ

(...1ನೇ ಪುಟದಿಂದ)



ಉದಯಾದ್ರಿ ಕ್ಷೇತ್ರದಲ್ಲಿ ದೇವಸ್ಥಾನದ ಕಾಮಗಾರಿಗಳು ಇನ್ನೂ ನಡೆಯಬೇಕಾಗಿದ್ದು ಇದಕ್ಕಾಗಿ ದಾನಿಗಳಿಂದ ಹಣದ ನಿರೀಕ್ಷೆ ಮಾಡಲಾಗಿದೆ. ಶ್ರೀ ಕ್ಷೇತ್ರಕ್ಕೆ ಬರುವ ಭಕ್ತರ ಸಂಖ್ಯೆ ಈಗಾಗಲೇ ಹೆಚ್ಚುತ್ತಿದ್ದು ಸೇವಾ ರೂಪದಲ್ಲಿ ಶ್ರೀ ದೇವರ ಪೂಜಾ ಕಾರ್ಯಗಳು ಸಾಕಷ್ಟು ನಡೆಯುತ್ತಿವೆ. ಜೀರ್ಣೋದ್ಧಾರ ಸಮಿತಿಯು ಮಾಡಬೇಕೆಂದು ಸಂಕಲ್ಪಿಸಿದ ಎಲ್ಲಾ ಕಾಮಗಾರಿಗಳೂ ನಡೆದು ದೇವಳದ ಮುಂಭಾಗದಲ್ಲಿ ಶ್ರೀ ಕ್ಷೇತ್ರವು ಉಡುಪಿ ಜಿಲ್ಲೆಯ ದಕ್ಷಿಣದ ಭಾಗದಲ್ಲಿರುವ ಒಂದು ಪ್ರಸಿದ ಸಣ್ಣ ಕ್ಷೇತ್ರವಾಗಿ ನಿರ್ಮಾಣಗೊಂಡು ಉಡುಪಿ ಜಿಲ್ಲೆಯ ನಕ್ಷೆಯಲ್ಲಿ ಕಾಣಿಸಿಕೊಳ್ಳುವಲ್ಲಿ ಸಫಲವಾಗಲಿ ಎಂದು ಶ್ರೀ ಶಾರದಾ ಹಾರೈಕೆ.

## ಕುಂದಾಪುರದಲ್ಲಿ ಸಂಭ್ರಮದ ಶಂಕರ ಜಯಂತಿ ಉತ್ಸವ

(...1ನೇ ಪುಟದಿಂದ)




ಭಕ್ತಬಾಂಧವರು ಪಾಲ್ಗೊಂಡರು. ಈ ಸಂದರ್ಭದಲ್ಲಿ ವಿದ್ಯಾವಾಚಸ್ಪತಿ 'ಅರಳು ಮಲ್ಲಿಗೆ' ಪಾರ್ಥ ಸಾರಥಿಯವರ ವಿಷ್ಣು ಸಹಸ್ರನಾಮ ವ್ಯಾಖ್ಯಾನ ಗ್ರಂಥ, ಹಾಗೂ ಡಾ। ಎಚ್. ವಿ. ನರಸಿಂಹ ಮೂರ್ತಿಯವರ ಶ್ರೀ ಶಂಕರಾಚಾರ್ಯರು - ಜೀವನ ಮತ್ತು ಸಂದೇಶ' ಎಂಬ ಎರಡು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ಶ್ರೀಗಳ ಸಮ್ಮುಖದಲ್ಲಿ ನೆರವೇರಿತು.

ಇದೇ ಸಂದರ್ಭದಲ್ಲಿ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ ಪಡೆದ ಶ್ರೀಕ್ಷೇತ್ರ ಶೃಂಗೇರಿಯ ಆಡಳಿತಾಧಿಕಾರಿ ಶ್ರೀ ಗೌರಿಶಂಕರ್ ಅವರನ್ನು ಆತ್ಮೀಯವಾಗಿ ಗೌರವಿಸಲಾಯಿತು.

ಬೇರೆ ಬೇರೆ ದಿನಗಳಲ್ಲಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ। ಪಾದೆಕಲ್ಲು ವಿಷ್ಣು ಭಟ್, ಡಾ। ಪ್ರಭಾಕರ್ ರಾವ್, ಶ್ರೀ ಕುಂಬ್ಳೆ ಸುಂದರರಾವ್, ಶ್ರೀ ಚಕ್ರವರ್ತಿ ಸೂಳಿಬೆಲೆ, ಡಾ। ನಿಟಿಲಾಪುರ ಕೃಷ್ಣಮೂರ್ತಿ ಮೊದಲಾದ ವೇದ ವಿದ್ವಾಂಸರು ಪಾಲ್ಗೊಂಡರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಾಡಿನ ವಿವಿಧ ಪ್ರಕಾರದ ಕಲೆಗಳು ಪ್ರತಿದಿನ ಪ್ರದರ್ಶಿಸಲ್ಪಟ್ಟವು.

ಮೇ. 9ರಂದು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಆಯ್ದು ಅಂಗವಿಕಲರಿಗೆ ಮೂರು ಚಕ್ರದ ಸೈಕಲು, ಕೃತಕ ಕಾಲು, ಶ್ರವಣ ಸಾಧನ, ವೈಜ್ಞಾನಿಕ ಊರುಗೋಲು, ಮಹಿಳೆಯರಿಗೆ ಹೊಲಿಗೆ ಯಂತ್ರ ಮೊದಲಾದ ಸಹಾಯಕ ಉಪಕರಣಗಳನ್ನು ಉಚಿತವಾಗಿ ವಿತರಣೆ ಮಾಡಲಾಯಿತು.

ತಾ.10ರಂದು ಶ್ರೀ ಶಂಕರಾಚಾರ್ಯರ ವಿಗ್ರಹದ ಪುರ ಮೆರವಣಿಗೆ ನಡೆಯಿತು. ಹಾಗೂ ಶೃಂಗೇರಿ ಶ್ರೀಗಳನ್ನು ತಮ್ಮ ಮುಂದಿನ ಪ್ರವಾಸಕ್ಕಾಗಿ ಬೀಳ್ಕೊಡಲಾಯಿತು.

ಪ್ರತಿ ದಿನ ಅನ್ನಸಂತರ್ಪಣೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡರು.

ಈ ಎಲ್ಲಾ ಕಾರ್ಯಕ್ರಮಗಳು ಶ್ರೀ ಶಂಕರ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ಸುಬ್ರಾಯ ಹಾಲಂಬಿ ಹಾಗೂ ಪ್ರಧಾನ ಕಾರ್ಯದರ್ಶಿ ಡಾ। ಎಚ್. ವಿ. ನರಸಿಂಹಮೂರ್ತಿಯವರ ಮುಂದಾಳುತ್ವದಲ್ಲಿ ನೆರವೇರಿತು.



## ಶ್ರೀ ಐ. ಪಿ. ನಾಗರಾಜರಾವ್



ಮಣಿಪಾಲ ಸಿಂಡಿಕೇಟ್ ಬ್ಯಾಂಕ್ ಪ್ರಧಾನ ಕಛೇರಿಯಲ್ಲಿ ಪ್ರಧಾನ ಲೆಕ್ಕಪತ್ರ ವಿಭಾಗದಲ್ಲಿ ಚಾರ್ಟರ್ಡ್ ಅಕೌಂಟೆಂಟ್ (ಚೀಫ್ ಮೆನೇಜರ್ ಗ್ರೇಡ್) ಆಗಿದ್ದ ಶ್ರೀಯುತ ಐ. ಪಿ. ನಾಗರಾಜರಾವ್ ಅವರು ಪದೋನ್ನತಿ ಹೊಂದಿ ತಾ.02-05-2008ರಿಂದ ಬ್ಯಾಂಕಿನ ಅಸಿಸ್ಟೆಂಟ್ ಜನರಲ್ ಮೆನೇಜರ್‌ರಾಗಿ ಅಧಿಕಾರ ಸ್ವೀಕರಿಸಿದ್ದಾರೆ. 1985ರಲ್ಲಿ ಸಿಂಡಿಕೇಟ್ ಬ್ಯಾಂಕಿನ ಸೇವೆಗೆ ಸೇರಿದ್ದ ಶ್ರೀಯುತರು ದೆಹಲಿ, ಆಗ್ರಾ, ಉಡುಪಿ, ಬೆಂಗಳೂರು, ಮಣಿಪಾಲ ಸಹಿತ ಹಲವು ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಇನ್ನಪದವು ನಾಗರಾಜರಾವ್ ಅವರು ಉಡುಪಿಯ ಶ್ರೀ ಸ್ಥಾನಿಕದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರಾಗಿದ್ದರು. ಶ್ರೀ ಐ. ಪಿ. ನಾಗರಾಜರಾವ್ ಅವರಿಗೆ ಇನ್ನೂ ಹೆಚ್ಚಿನ ಶ್ರೇಯಸ್ಸಾಗಲಿ ಎಂದು ಶ್ರೀಶಾರದಾ ಹಾರೈಕೆ.

## ವಿಳಾಸ ಬದಲಾವಣೆ

**ಆರ್. ಕಮಲಾಕರ,** ಲೆಕ್ಕ ಅಧೀಕ್ಷಕರು, ''ಮಾನಸ'', ಮನೆ ನಂಬ್ರ 5-42(5),
ಅನುಗ್ರಹ ಸಭಾಭವನದ ಎದುರು, ಕುಕ್ಕಿಕಟ್ಟೆ, ಉಡುಪಿ - 576 101.

## THE REGISTRATION OF NEWS PAPERS (CENTRAL) RULES 1956

### SCHEDULE

FORM OF DECLARATION

Form 1 (See Rule-3)

I Y.Bhuvanendra Rao, declare that I am the publisher of the Newspaper entitled "Shree Sharada" to be published at Udupi on behalf of Shree Sthanika Dravida Brahmana Sangha,® and that particulars in respect of the said News Paper given hereunder are true to the best of my knowledge and belief .

| | | | |
|---|---|---|---|
| 1. | Title of the News Paper | : | SHRI SHARADA |
| 2. | Language in which it is to be published | : | KANNADA |
| 3. | Periodicity of this publication | : | a) Monthly<br>b) 15th of every month |
| 4. | Registration No | : | Registered Under No.KA/SK/UDP/1260/ 2006-2008 Dated from 01-01-2006 to 31-12-2008. Licenced to Post without Prepayment WPP No. SK/ UDP/01. |
| 5. | Retail selling price of the Newspaper per copy | : | Rs 2-50 |
| 6. | Publisher's Name | : | Y.Bhuvanendra Rao, Secretary, Sri Sthanika Dravida Brahmana Sangha, ® Kunjibettu, Udupi-576102. |
| 7. | Place of Publication | : | Sri Sharada Mantapa, Kunjibettu, Udupi - 576102. |
| 8. | Editor's Name | : | Sri Y.Mohan Rao, Udupi |
| | Nationality | : | Indian |
| | Address | : | "Kalpavruksha", Andrade Lane, Valakadu, Udupi - 576101 |
| 9. | Printer's Name | : | Vishnu Moorthy Thantry |
| | Nationality | : | Indian |
| | Address | | Agrahara Offsets, Behind Karnataka Bank, Car Street, Udupi - 576101 |
| 10. | Name of the printing press where the Newspaper is actually printed and the true and precise description of the premised on which the press is installed | : | Agrahara Offsets, Behind Karnataka Bank, Car Street Udupi. |
| 11. | Owner's Name | : | Sri Sthanika Dravida Brahmana Sangha ®, Kunjibettu, Udupi-576102 |
| | a) Individual or Firm | : | Firm |
| | b) Whether the owner owns any Newspaper | : | No |
| 12. | Please state whether the declaration is in respect of | : | a) A Monthly Newspaper |

Date :15-05-2008
Place :UDUPI

Sd/-
The Secretary
For Sri Sthanika Dravida Brahmana Sangha (R), Udupi

**PRAMOD**
AUTOMOBILES
Ph : 2491723 (O)
2493633 (H.O.)
2212723 (R)
KARANGALPADY, MANGALORE - 575 003.
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln.K. HARSHA KUMAR